# ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪಾಂಡವಪುರ.

## ಸಿ.ಸಿ. 775/2021

ಸಾಕ್ಷಿದಾರರ ಹೇಳಿಕೆ ಃ

| | | | |
|---|---|---|---|
| ಹೆಸರು | ಃ | ಕೆಂಪರಾಜು | ಚಾಸಾಃ **1** ಪ್ರಾಸಾಃ **1** |
| ತಂದೆಯ ಹೆಸರು | ಃ | ತಮ್ಮೇಗೌಡ | |
| ವಯಸ್ಸು | ಃ | 65 ವರ್ಷ | |
| ವೃತ್ತಿ | ಃ | ವ್ಯವಸಾಯ | |
| ವಾಸಸ್ಥಳ | ಃ | ಎಂ.ಶೆಟ್ಟಹಳ್ಳಿ ಗ್ರಾಮ | |

ದಿನಾಂಕಃ **24.06.2025** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ.ರವರಿಂದ ಃ

**01**. ಸುಮಾರು 4 ವರ್ಷಗಳ ಹಿಂದೆ ಯಾರೋ ಫೋನ್ ಮಾಡಿ ನನ್ನ ಮಗನಿಗೆ ರಸ್ತೆ ಅಪಘಾತವಾಗಿದೆ ಎಂದು ತಿಳಿಸಿದರು. ನಾನು ಸ್ಥಳಕ್ಕೆ ಹೋಗಿ ಮೈಸೂರು ಆಸ್ಪತ್ರೆಗೆ ಸೇರಿಸಿದೆ. ಅಪಘಾತವಾದ 6 ತಿಂಗಳು ನನ್ನ ಮಗ ಜೀವಂತವಿದ್ದ, ಆ ನಂತರ ತೀರಿಕೊಂಡ. ನನ್ನ ಮಗ ಎಲ್ಲಿಗೆ ಹೋಗಿ ಅಪಘಾತವಾಯಿತು ಗೊತ್ತಿಲ್ಲ, ಯಾರ ಜೊತೆ ಹೋಗಿದ್ದ ಗೊತ್ತಿಲ್ಲ, ಅಪಘಾತ ಹೇಗಾಯಿತು ಗೊತ್ತಿಲ್ಲ. ಈ ಸಂಬಂಧ ನಾನು ಪೊಲೀಸರಿಗೆ ದಿಃ14.04.02021 ರಂದು ಮತ್ತು ದಿಃ24.09.2021 ರಂದು ಎರಡು ಬಾರಿ ದೂರನ್ನು ಕೊಟ್ಟಿರುತ್ತೇನೆ. ಸಾಕ್ಷಿಗೆ ಎರಡು ದಾಖಲೆಯನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ದೂರು ಅರ್ಜಿಗಳಾಗಿದ್ದು, ಅವುಗಳನ್ನು ಕ್ರಮವಾಗಿ ಈಗ ನಿಪಿ-**1** ಮತ್ತು **2** ಎಂದು, ಸಾಕ್ಷಿಯ

ಸಹಿಗಳನ್ನು ನಿಪಿ-**1**(ಎ) ಮತ್ತು **2**(ಎ) ಎಂದು ಗುರುತಿಸಲಾಯಿತು. ನಿಪಿ-1 ಮತ್ತು 2 ರ ಅಂಶಗಳು ನನಗೆ ಗೊತ್ತಿಲ್ಲ. ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಲಾಗಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ದಾಖಲೆಯು ಮಹಜರ್ ಆಗಿದ್ದು, ಅದನ್ನು ಈಗ ನಿಪಿ-**3** ಎಂದು, ಸಾಕ್ಷಿಯ ಸಹಿಯನ್ನು ನಿಪಿ-**3**(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಎರಡು ಫೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ-**4** ಮತ್ತು **5** ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ.ರು ಅನುಮತಿ ಕೋರಿರುತ್ತಾರೆ. ಅನುಮತಿಸಲಾಯಿತು.)**

<u>ಪಾಟೀ ಸವಾಲು ಃ ಸ.ಸ.ಅ.ರವರಿಂದ ಃ</u>

**01**. ದಿನಾಂಕಃ 11.04.2021 ರಂದು ಮದ್ಯಾಹ್ಯ 2.30 ರ ಸಮಯದಲ್ಲಿ ನನ್ನ ಮಗ ಕೊಡಾಲ ಗ್ರಾಮಕ್ಕೆ ಸ್ನೇಹಿತರನ್ನು ನೋಡಿಕೊಂಡು ಬರುತ್ತೇನೆ ಎಂದು ಹೋಗಿದ್ದ ಎಂದರೆ ಸರಿ. ಆತ ನವೀನ ಎಂಬ ಹುಡುಗನ ಬೈಕ್ ನಂಃ ಕೆ.ಎ.11 ಇ.ಆರ್.6556 ಹಿಂಭಾಗದಲ್ಲಿ ಕುಳಿತುಕೊಂಡು ಎರಗೇಗೌಡರನ ಹಳ್ಳಿ ಗ್ರಾಮದ ರಮೇಶ್ ರವರ ಜಮೀನಿನ ನೇರದಲ್ಲಿ ನವೀನ ಬೈಕ್ ಅನ್ನು ಅತಿವೇಗ ಮತ್ತು ಅಜಾಗರುಕತೆಯಿಂದ ಓಡಿಸಿಕೊಂಡು ಬಂದ ಎಂದರೆ ಸರಿಯಲ್ಲ. ಆಗ ರಸ್ತೆಗೆ ಅಡ್ಡಲಾಗಿ ನಾಯಿ ಬಂದಿದ್ದರಿಂದ ನಿಯಂತ್ರಿಸಲಾಗದೇ ಸಡನ್ನಾಗಿ ಬ್ರೇಕ್ ಹಾಕಿದ್ದರಿಂದ ಬೈಕ್ ಸ್ಕಿಡ್ ಆಗಿ ಬಿದ್ದ ಪರಿಣಾಮ ನಾಗೇಶನ ಕುತ್ತಿಗೆಯ ಬಳಿ ಪೆಟ್ಟಾಗಿದೆ ಎಂದರೆ ಸರಿಯಲ್ಲ. ನನಗೆ ವಿಚಾರ ತಿಳಿದು ಸ್ಥಳಕ್ಕೆ ಬಂದು ನೋಡಲಾಗಿ ನಾಗೇಶನಿಗೆ ಅಲ್ಪ ಸ್ವಲ್ಪ ಜ್ಞಾನ ಇತ್ತು, ನವೀನನಿಗೆ ಕೈ ಕಾಲು ತರಚಿತ್ತು ಎಂದರೆ ಸರಿಯಲ್ಲ. ಈ ಸಂಬಂದ ನಿಪಿ-1 ರಂತೆ ದಿಃ14.04.2021 ರಂದು ಪಾಂಡವಪುರ ಪೊಲೀಸರಿಗೆ ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

**2.** ನನ್ನ ಮಗ ಮೈಸೂರಿನ ಬಾನವಿ ಆಸ್ಪತ್ರೆಯಲ್ಲಿ ಒಳ ರೋಗಿಯಾಗಿ ಚಿಕಿತ್ಸೆ ಪಡೆದಿದ್ದ ಎಂದರೆ ಸರಿ. ಆ ನಂತರ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿದ್ದ ಎಂದರೆ ಸರಿ. ಈ

ಅಪಘಾತದಿಂದ ನನ್ನ ಮಗ ನಾಗೇಶನಿಗೆ ಕುತ್ತಿಗೆ, ಕತ್ತಿನ ಮೂಳೆಗೆ, ಬೆನ್ನು ಮೂಳೆ ಮುರಿದು ತೀವ್ರವಾಗ ಪೆಟ್ಟಾಗಿ ಪ್ರಜ್ಞಹೀನ ಸ್ಥಿತಿಯಲ್ಲಿದ್ದ ಎಂದರೆ ಸರಿ. ದಿ:24.09.2021 ರಂದು ಬೆಳಗ್ಗೆ ಉಸಿರಾಟದ ತೊಂದರೆ ಉಂಟಾಗಿದ್ದರಿಂದ ಮೃತಪಟ್ಟ ಎಂದರೆ ಸರಿ. ಈ ಸಂಬಂದ ದಿ:24.09.2021 ರಂದು ನಿಪಿ-2 ರಂತೆ ಪಾಂಡವಪುರ ಪೊಲೀಸರಿಗೆ ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

**3.** ದಿ:14.04.2021 ರಂದು ಪಾಂಡವಪುರ ಪೊಲೀಸರು ಅಪಘಾತದ ಸ್ಥಳದಲ್ಲಿ ನನ್ನ ಮತ್ತು ಚಾ.ಸಾ-6 ಮತ್ತು 7 ರವರ ಸಮಕ್ಷಮ ಮದ್ಯಾಹ್ನ 3.00 ರಿಂದ 4.00 ಗಂಟೆಗೆಯ ವರಗೆ ಸ್ಥಳ ಪಂಚನಾಮೆಯನ್ನು ಜರುಗಿಸಿದರು ಎಂದರೆ ಸರಿಯಲ್ಲ. ನನ್ನ ಮಗನು ರಸ್ತೆ ಅಪಘಾತದಲ್ಲಿ ತೀರಿಕೊಳ್ಳಲು ಆರೋಪಿಯೇ ಕಾರಣನಾಗಿದ್ದಾನೆ ಎಂದು ಗೊತ್ತಿದ್ದರು ಸಹ ಆರೋಪಿ ನನ್ನ ಮಗನ ಸ್ನೇಹಿತನಾದ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು :: ಆರೋಪಿ ಪರ ವಕೀಲರಿಂದ ಏನು ಇಲ್ಲ ಎಂದು ತಿಳಿಸಿರುತ್ತಾರೆ.

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ. ಕೇ. ಸ. ಇದೆ.

**I/C 2** ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,
ಪಾಂಡವಪುರ.

ಸಾಕ್ಷಿದಾರರ ಸಹಿ.